



ನಿರ್ನಾಮವಾಗಿ ಹೋದ ದುರ್ಘಟನೆ ಇದು.

ಜೇಮ್ಸ್ ಮಾರ್ಷಲ್ ಎಂಬ ಬಡಗಿಯು ಕ್ಯಾಲಿಫೋರ್ನಿಯಾದ ಕಲೋಮಾ ವ್ಯಾಲಿಯಲ್ಲಿ ಮರಗಳನ್ನು ಕೊಯ್ಯುವ ಕಾರ್ಖಾನೆಯ (ಸಾ ಮಿಲ್) ನಿರ್ಮಾಣದಲ್ಲಿ ನಿರತನಾಗಿದ್ದ. 24 ಜನವರಿ 1848ರಂದು ಕಾರ್ಖಾನೆಗೆ ಹೊಂದಿಕೊಂಡಿದ್ದ ನೀರಿನ ತೊರೆಯಲ್ಲಿ ಅವನಿಗೆ ಇದ್ದಕ್ಕಿದ್ದಂತೆ ಚಿನ್ನದ ಚೂರೊಂದು ದೊರಕಿತು. ಸ್ವಲ್ಪ ಹುಡುಕಿದಾಗ ನಾಲ್ಕೈದು ನಗೆಟ್ಟುಗಳು ಸಿಕ್ಕಿದವು.

ಕಾಳ್ಗಿಚ್ಚಿನಂತೆ ಹಬ್ಬಿದ ಈ ಸುದ್ದಿಯಿಂದ ಕೆಲವೇ ತಿಂಗಳುಗಳಲ್ಲಿ ಸುಮಾರು ಮೂರು ಲಕ್ಷ ಜನರು ಅಮೆರಿಕದ ಇತರ ಕಡೆಗಳಿಂದ ಹಾಗೂ ಯೂರೋಪ್, ಲ್ಯಾಟಿನ್ ಅಮೆರಿಕ, ಆಸ್ಟ್ರೇಲಿಯಾ ಹಾಗೂ ಚೀನಾಗಳಿಂದ ಕ್ಯಾಲಿಫೋರ್ನಿಯಾಗೆ ಬಂದಿಳಿದರು. ಚಿನ್ನದ ಬೇಟೆ ಆರಂಭವಾಯಿತು. ಇದನ್ನೇ ಚರಿತ್ರೆಯಲ್ಲಿ 'ಕ್ಯಾಲಿಫೋರ್ನಿಯಾ ಗೋಲ್ಡ್ ರಶ್' ಎಂದು ಕರೆಯುವುದು.

## ಚಿನ್ನದ ಬೇಟೆಗೆ ದಾರಿ ಯಾವುದಯ್ಯ?

ಲಕ್ಷಾಂತರ ಜನರು ಬಂದ ಮೇಲೆ ಕ್ಯಾಲಿಫೋರ್ನಿಯಾವನ್ನು ಒಂದು ರಾಜ್ಯವನ್ನಾಗಿ ಘೋಷಿಸಲಾಯಿತು. ಅವರದೇ ಕೌನ್ಸಿಲರ್‌ಗಳನ್ನು ಚುನಾಯಿಸಿಕೊಂಡು ಸಂವಿಧಾನವನ್ನು ಬರೆಯಲಾಯಿತು. ನಾಗರಿಕ ಸಮಾಜದ ಕಣ್ಣಿಗೆ ಶ್ರೇಷ್ಠತೆಯ ಕುರುಹಾಗಿ ಕಾಣುವ ಇವುಗಳ ಹಿಂದೆ ನಡೆದಿದ್ದೇ ಬೇರೆ. ಭೂಮಿಯ ಒಡೆತನದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿದ್ದ ಸ್ಥಳವೊಂದಿಗ ರೆಡ್ ಇಂಡಿಯರನ್ನು ಅವರ ಜಾಗಗಳಿಂದ ಓಡಿಸಿ, 'ಇದು ನನ್ನ ಆಸ್ತಿ' ಎಂದು ಘೋಷಿಸಿಕೊಂಡರು. ಚಿನ್ನ ಏನೆಂದು ಗೊತ್ತಿಲ್ಲದ, ಅದರ ಬೆಲೆಯನ್ನು ತಿಳಿಯದ ಸ್ಥಳೀಯ ಜನರನ್ನು ಕೊಲ್ಲಲಾಯಿತು. ವಿರೋಧ ತೋರಿಸಿದವರನ್ನು ನಿರ್ನಾಮ ಮಾಡಲಾಯಿತು. ಲೂಟಿಗಾರನೇ ರಾಜನಾಗಿ ಚಿನ್ನವನ್ನು ಕೊಳ್ಳೆಹೊಡೆದು ಅಮೆರಿಕದ ಆರ್ಥಿಕ ಬೆಳವಣಿಗೆಗೆ ನಾಂದಿ ಹಾಡಿದರು. 1849ರಲ್ಲಿ ಅವರೆಲ್ಲಾ ಅಲ್ಲಿಗೆ ಬಂದಿದ್ದರಿಂದ ತಮ್ಮನ್ನು 'ಫಾರ್ಟಿ ನೈನರ್ಸ್' ಎಂದು 'ಹೆಮ್ಮೆ'ಯಿಂದ ಕರೆದುಕೊಂಡರು!

## ಒಂದು ಪಿಕಾಸಿ, ಜರಡಿ ಸಾಕು!

ಚಿನ್ನದ ಬೆನ್ನತ್ತಿ ಬಂದ ಜನರ ಬೇಕು ಬೇಡಗಳಿಗಾಗಿ ವ್ಯಾಪಾರ, ವ್ಯವಹಾರ, ವ್ಯವಸಾಯಗಳು ಹೆಚ್ಚಿದವು; ಪಶುಸಂಗೋಪನೆಯೂ ಅದಕ್ಕೆ ತಕ್ಕ ದೊಡ್ಡ ದೊಡ್ಡ ಹುಲ್ಲುಗಾವಲುಗಳು ತಲೆ ಎತ್ತಿದವು. 1846ರಲ್ಲಿ ಇನ್ನೂರು ಜನರಿದ್ದ ಸ್ಯಾನ್‌ಫ್ರಾನ್ಸಿಸ್ಕೋ ಗ್ರಾಮವು 1852ರಲ್ಲಿ ಮೂವತ್ತಾರು ಸಾವಿರ ಜನಸಂಖ್ಯೆಯ ಪಟ್ಟಣವಾಯಿತು. ಆದರೆ ಅಲ್ಲಿ ಸುತ್ತಮುತ್ತಲೂ ಇದ್ದ ರೆಡ್ ಇಂಡಿಯನ್ ಜನಾಂಗದವರಿಗೆ ಏನಾಗಿರಬಹುದು ಎಂಬುದು ನಿಮ್ಮ ಊಹೆಗೆ ಬಿಟ್ಟ ವಿಚಾರ. ಈಗ ಅಲ್ಲಿ ರೆಡ್ ಇಂಡಿಯನ್ ಜನರು ಇಲ್ಲವೇ ಇಲ್ಲ ಎನ್ನುವ ಮಟ್ಟಕ್ಕೆ ಬಂದು ಮುಟ್ಟಿದೆ. ಅವರು ಆಡುತ್ತಿದ್ದ ಸ್ಥಳೀಯ ಭಾಷೆಗಳು ಮಾಯವಾಗಿವೆ. ಅವರ ನಂಬಿಕೆ, ಆಚರಣೆ, ವಂಶವಾಹಿನಿಯಾಗಿ ಬಂದಿದ್ದ ವಿಶಿಷ್ಟ ಜನಪದ ಜ್ಞಾನವು ಹೇಳಹೆಸರಿಲ್ಲದಂತೆ ನಾಶವಾಗಿಹೋಗಿದೆ.

ಭೂಮಿಯ ಮೇಲಿನ ತೊರೆಗಳ ಪಾತ್ರದಲ್ಲಿ ಚಿನ್ನವು ಎಷ್ಟು ಕಾಲ ತಾನೇ ದೊರಕೀತು? ಅದು ಖಾಲಿಯಾದ ಮೇಲೆ ಚಿನ್ನದ ಗಣಿಗಾರಿಕೆಯು ಪ್ರಾರಂಭವಾಯಿತು. ಅಲ್ಲಿ ಕೆಲಸಕ್ಕೆ ಆಫ್ರಿಕಾದ ಗುಲಾಮರನ್ನು ತಂದದ್ದು ಇನ್ನೊಂದು ದೊಡ್ಡ ಕಥೆ–ವ್ಯಥೆ.

ಚಿನ್ನವನ್ನು ಕೇಂದ್ರವಾಗಿಸಿಕೊಂಡು ನಡೆದ ಸಾಮಾಜಿಕ ದುರಂತಗಳ ಘಟನೆಗಳಿಗೆ ಪೂರಕವಾಗಿ ಇಂಗ್ಲಿಷಿನಲ್ಲಿ ಅನೇಕ ಚಲನಚಿತ್ರಗಳು ಬಂದಿವೆ. 'ಮೆಕನಾಸ್ ಗೋಲ್ಡ್', 'ದ ಗುಡ್ ದ